ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 6, May-Jun 2020, 55-60
©*IIMRD*, Mysuru
IIMRD JOURNALS
www.iimrd.com

# ಕುವೆಂಪುರವರ ಶ್ಮಶಾನ ಕುರುಕ್ಷೇತ್ರಂ ನಾಟಕ: ವಿಮರ್ಶಾತ್ಮಕ ಅಧ್ಯಯನ

**ಬಸಪ್ಪ ಚನ್ನಪ್ಪ ಹೆಬ್ಬಾಳ***

## ಪೀಠಿಕೆ

ಮಹಾಕವಿ ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕ ಮಹಾಭಾರತ ಯುದ್ಧದ ಪರಿಣಾಮವನ್ನು ಚಿತ್ರಿಸಿದ ಕೃತಿಯಾಗಿದೆ. ಮಹಾಭಾರತ ಯುದ್ಧ ಕೊನೆಗೊಂಡ ದಿನದ ಘೋರ ವಿಷಣ್ಣ ರಾತ್ರಿಯ ಚಿತ್ರಣ ಇಲ್ಲಿದೆ. ಅದುವರೆಗೂ ರಣಕಲಿಗಳ ಸಾಹಸ ಕ್ಷೇತ್ರವಾಗಿದ್ದ ಕುರುಕ್ಷೇತ್ರ ಈಗ ಶ್ಮಶಾನವಾಗಿದೆ. ಈ ಭೀಕರ ರಾತ್ರಿಯಂದೇ ದ್ವಾಪರಯುಗ ಮುಗಿದು ಕಲಿಯುಗ ಪ್ರಾರಂಭವಾಗುತ್ತದೆ. ಈ ರಾತ್ರಿಯು ಎರಡು ಯುಗಗಳ ಸಂಧಿಕಾಲ. ದ್ವಾಪರಯುಗದ ಯುಗಪುರುಷ ದ್ವಾಪರನು ಮಹಾಭಾರತ ಯುದ್ಧದ ಭೀಕರ ಪರಿಣಾಮವನ್ನು ನೋಡಿ ತೀವ್ರ ದುಃಖಿಸುತ್ತಿರುವ ಸಂದರ್ಭದಲ್ಲಿ ಕಲಿಯ ಪ್ರವೇಶವಾಗುತ್ತದೆ. ಈ ಸಂದರ್ಭದಲ್ಲಿ ದ್ವಾಪರನ ವಿಷಾದ, ದುಃಖವನ್ನು ನಿವಾರಿಸಲು ಕಲಿ ಸಾಂತ್ವನ ಹೇಳುತ್ತಾನೆ. ಆಗ ಕಲಿಯು ದ್ವಾಪರನೊಂದಿಗೆ ನಡೆಸಿದ ಸಂವಾದ ವಿಶ್ವ ರಹಸ್ಯವನ್ನು ಬೋಧಿಸುತ್ತದೆ. ಇದು ನನ್ನನ್ನು ಗಾಢವಾಗಿ ಚಿಂತನೆಗೆ ದೂಡಿದ ದೃಶ್ಯ. ಇದಾದ ನಂತರ ಕೃಷ್ಣ ಮತ್ತು ವಿಧುರನ ಸಂಭಾಷಣೆ, ತದನಂತರ ಬರುವ ಕೊನೆಯ ದೃಶ್ಯದಲ್ಲಿ ಕೃಷ್ಣನು, ಮಹಾದೇವ(ರುದ್ರ)ನಿಗೆ ಕಲಿಯುಗ ಮಹಾಕಾವ್ಯವನ್ನು ತೋರಿಸಿದ ರೀತಿ, ಇವುಗಳ ಮೇಲಿನ ಚಿಂತನೆಯೇ ಈ ಲೇಖನದ ಉದ್ದೇಶವಾಗಿದೆ.

## ವಿವರಣೆ

ದ್ವಾಪರನ ಅಧಿಪತ್ಯದ ಸುವರ್ಣಯುಗವೊಂದು ಕುರುಕ್ಷೇತ್ರದ ಪ್ರಳಯಾಗ್ನಿಗೆ ಆಹುತಿಯಾಗಿ ಶ್ಮಶಾನವಾಗಿದೆ. ದ್ವಾಪರನು ತನ್ನ ಯುಗದ ಗತವೈಭವವನ್ನು ನೆನೆಯುತ್ತಾ, ಶ್ಮಶಾನವಾದ ಕುರುಕ್ಷೇತ್ರವನ್ನು ನೋಡುತ್ತಾ ಕಂಬನಿಗರೆಯುತ್ತಾನೆ. ತನ್ನ ಕಾಲದ ಯುಗಶ್ರೇಷ್ಠರು, ಪುಣ್ಯಾತ್ಮರು, ವೀರಾಧಿವೀರರಾದ ಭೀಷ್ಮ, ದ್ರೋಣ, ಕರ್ಣ, ಅಭಿಮನ್ಯು, ದುರ್ಯೋಧನರೆಲ್ಲ ಹತರಾದರಲ್ಲಾ ಎಂದು ಅತೀಶಯ ದುಃಖದಿಂದ ತೊಳಲಾಡುತ್ತಿದ್ದಾನೆ. ದ್ವಾಪರನ ಸಂಕಟವನ್ನು ನೋಡಿದಾಗ, ಈ ಕಲಿಯುಗದ ಅಂತ್ಯದಲ್ಲಿ ಕಲಿಪುರುಷನು ಅದಾವ ಮಹಾಪುರುಷರನ್ನು ನೆನೆದು ಕಂಬನಿಗರೆಯುತ್ತಾನೆಂಬ ಕುತೂಹಲವುಂಟಾಗುತ್ತದೆ. ಕಲಿಯುಗದ ಅದಾವ ಶ್ರೇಷ್ಠರು, ವೀರರು, ಪುಣ್ಯಾತ್ಮರು ಕಲಿಯ ಬಾಯಿಯಿಂದ ಚರಮ ಶ್ಲೋಕ ಹೇಳಿಸಿಕೊಳ್ಳುತ್ತಾರೊ, ಕಲಿ ಯಾರಿಗಾಗಿ ನೊಂದುಕೊಳ್ಳುತ್ತಾನೊ ನೋಡುವಾಸೆ.

* *ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಶ್ರೀಪಾದಬೋಧ ಸ್ವಾಮಿಜಿ ಸರಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ.*

ದ್ವಾಪರನು ಸ್ವಗತವಾಗಿ ಮಾತನಾಡುತ್ತ ಏಕಾಂಗಿಯಾಗಿ ಕುರುಕ್ಷೇತ್ರದಲ್ಲಿ ಬರುತ್ತಿರುವಾಗ ಕಲಿಯು ಎದುರುಗೊಳ್ಳುತ್ತಾನೆ. ಆಗ ಕಲಿಯನ್ನು ಕಂಡು ಇಂತಹ ಕರಾಳ ರಾತ್ರಿಯಲ್ಲಿ, ಹೀನಾಯ ಸ್ಥಿತಿಯಲ್ಲಿ ನಿನ್ನನ್ನು ಭೇಟಿಯಾಗುವಂತಾಯಿತೆ? ಎಂದು ಕಲಿಗೆ ಹೇಳಿ ಮರುಗುತ್ತಾನೆ. ಮುಂದುವರೆದು ದ್ವಾಪರದೇವನು ತನ್ನ ಯುಗದಾಳ್ವಿಕೆ ಮುಗಿದ ನಂತರ ಮುಂದಿನ ಯುಗದ ಉತ್ತರಾಧಿಕಾರಿಯಾದ ನಿನಗೆ(ಕಲಿಗೆ) ಅಧಿಕಾರ ಹಸ್ತಾಂತರ ಮಾಡುವಾಗ, ನನ್ನ ಯುಗದ ಶ್ರೇಷ್ಠತೆಯೆಲ್ಲಾ ಮಣ್ಣು ಪಾಲಾಗಿರುವಾಗ ಅದಾವ ಹೆಮ್ಮೆಯಿಂದ ನಿನಗೆ ಅಧಿಕಾರ ಕೊಡಲೆಂದು ನೊಂದುಕೊಳ್ಳುತ್ತಾನೆ. ಅದೆಂತಹ ಅದ್ಭುತ ಕವಿಕಲ್ಪನೆ, ಹಾಗೊಂದು ವೇಳೆ ಯುಗ ಪುರುಷರಿರುವುದೇ ಆದರೆ ನಮ್ಮ ಯುಗದಾಂತ್ಯದಲ್ಲಿ ಕಲಿಗೆ ಅದಾವ ಯುಗಪುರುಷ ಎದುರುಗೊಳ್ಳುತ್ತಾನೊ? ಕಲಿ ಅದಾವ ಪರಿ ನೊಂದುಕೊಳ್ಳುತ್ತಾನೊ? ದ್ವಾಪರಯುಗದ ಅಂತ್ಯಕ್ಕಿಂತಲೂ ಕಲಿಯುಗದ ಅಂತ್ಯ ಸಾವಿರಪಟ್ಟು ಜಾಸ್ತಿಯೇ ಇರುತ್ತದೆ, ಭಯಂಕರವಾಗಿರುತ್ತದೆ, ಪೈಶಾಚಿಕವಾಗಿರುತ್ತದೆ ಅಂದ ಮೇಲೆ ಸಂಭ್ರಮಿಸುತ್ತಾನೇನು?...

ದ್ವಾಪರನು ಸಂತಾಪದಿಂದ ನೋಯುತ್ತಿರಲು, ಕಲಿಯು ಹೇಳುವ ಸಾಂತ್ವನವು ಅದೆಷ್ಟು ಅರ್ಥಪೂರ್ಣವಾಗಿದೆ. ಈ ರಸಪೂರ್ಣವಾದ ಜಗತ್ತು ಶೂನ್ಯದಿಂದಲೇ ಹುಟ್ಟಿದೆ, ಅದು ಕೊನೆಗೆ ವಿಲೀನವಾಗುವುದು ಶೂನ್ಯದಲ್ಲೇ, ಎಲ್ಲಿಂದ ಬಂದಿದೆಯೋ ಅಲ್ಲಿಗೇ ಹೋಗಿದೆ ಯಾಕಿಷ್ಟು ಮೋಹ ಎನ್ನುತ್ತಾನೆ. ಹಾಗೆಯೇ ಅದು ಶೂನ್ಯದಲ್ಲಿ ವಿಲೀನವಾದರೂ ಬೇರೊಂದು ಆಕೃತಿ, ರೂಪವನ್ನು ತಳೆದು ಬೇರೊಂದು ಜಗದ ನಿಯಮಕ್ಕೆ ತಲೆಬಾಗಿ, ಬೇರೊಂದು ಕಾಲದಲ್ಲಿ ಚಿಗರೊಡೆಯುವುದು ಎಂದು ಹೇಳುತ್ತಾನೆ. ಈ ಕಲ್ಪನೆ ನಮ್ಮನ್ನು ಬ್ರಹ್ಮಾಂಡದ ಹುಟ್ಟಿನ ಬಗ್ಗೆ ಹೇಳುವ 'ಮಹಾಸ್ಫೋಟ ಸಿದ್ಧಾಂತ'ವನ್ನು ನೆನಪಿಸುತ್ತದೆ. ಹೌದು ಕಲಿಯ ಹೊಸ ಹುಟ್ಟಿನ ಚಿಂತನೆಗೆ ನಮ್ಮ ಯುಗವೂ ಹೊರತಲ್ಲ. ನಮ್ಮ ಯುಗವೂ ಅಂತ್ಯವಾಗುವುದೇ? ಇದಕ್ಕೆ ಸಂಶಯವಿಲ್ಲ ಕಲಿಯುಗದ ಅಧರ್ಮಿಗಳು, ದುರ್ಜನರು ಈ ಯುಗವನ್ನು ಅದಾವ ದುರಂತಕ್ಕೆ ಕೊಂಡೊಯ್ಯುವರೊ; ಹುಟ್ಟು, ವೈಭವ, ನಾಶ. ಮತ್ತೆ ಮರುಹುಟ್ಟು ........

ದ್ವಾಪರನಿಗೂ ಕಲಿಯುಗದ ಬಗ್ಗೆ ಕುತೂಹಲ ಮತ್ತು ತನ್ನ ಯುಗದ ಬಗ್ಗೆ ಹೆಮ್ಮೆಯಿತ್ತೇನೊ? ಏಕೆಂದರೆ ತನ್ನ ಕಾಲದ ಬ್ರಹ್ಮಚಾರಿಯಾದ ಭೀಷ್ಮನಂತೆ, ಬಿಲ್ಲಾಣನಾದ ದ್ರೋಣನಂತೆ, ದಾನಿಯಾದ ಕರ್ಣನಂತೆ, ಛಲದಂಕನಾದ ದುರ್ಯೋಧನನಂತೆ ನಿನ್ನ ಯುಗದಲ್ಲಿ ಜನಿಸುವರೋ? ಎಂದು ಕಲಿದೇವನನ್ನು ಪ್ರಶ್ನಿಸುತ್ತಾನೆ. ಹಾಗೆಯೆ ನಿನ್ನ ಯುಗದಲ್ಲಿ ಮಾನವರು ಕುಬ್ಜರಿರುವರೆಂದು ಕೇಳಿಪಟ್ಟಿದ್ದೇನೆಂದು ಹೇಳಿದಾಗ, ದ್ವಾಪರನ ತೀಕ್ಷ್ಣ ಪ್ರಶ್ನೆಗಳಿಗೆ ಕಲಿದೇವನು ಜಂಭದಿಂದಲೇ ಹೌದು ನೀನು ಹೇಳಿದ ಎಲ್ಲ ಶ್ರೇಷ್ಠರಿಗಿಂತಲೂ ಎರಡು ಪಟ್ಟು ಬ್ರಹ್ಮಚಾರಿ, ಬಿಲ್ಲಾಣರು, ದಾನಿಗಳು, ಶೂರರು, ವೀರರು, ಧರ್ಮಿಗಳು ನನ್ನ ಯುಗದಲ್ಲಿ ಜನಿಸುವರೆಂದು ಹೇಳುವಾಗ ಏಸು, ಬುದ್ಧ, ಬಸವ, ಶಂಕರ, ಪರಮಹಂಸ, ವಿವೇಕರು ನೆನಪಾಗುತ್ತಾರೆ. ಒಟ್ಟೊಟ್ಟಿಗೆ ಬೇರೆ ಬೇರೆ ಕಾರಣಗಳಿಗಾಗಿ ಅಶೋಕ, ಅಲೆಗ್ಸಾಂಡರ್, ನೆಪೋಲಿಯನ್, ಘಜ್ನಿ, ಘೋರಿ, ಅಕ್ಬರ, ಕೃಷ್ಣದೇವರಾಯ, ಅಂಬೇಡ್ಕರ್, ಶಿವಾಜಿ, ಪೃಥ್ವಿರಾಜ, ಹಿಟ್ಲರ್, ಸದ್ದಾಂ ಹುಸೇನ್, ಲಾಡೆನ್, ಗಾಂಧೀಜಿ, ಸುಭಾಶ್, ಕಲಾಂರಂತವರು ಕಲಿಯುಗದಲ್ಲಿ ಜನಿಸುವರು ಎಂದು ಹೇಳುತ್ತಾನೆ.

ದ್ವಾಪರಯುಗದ ಎಲ್ಲ ಆಯುಧಗಳು ನಮ್ಮ ಯುಗದ ಒಂದು ಪರಮಾಣು ಬಾಂಬ್‌ಗೆ ಸಮನಾಗುವುದು ಮತ್ತಿನ್ನೇನು? ಅವರೂ ಪುಷ್ಪಕ ವಿಮಾನದಲ್ಲಿ ಹಾರಾಡುತ್ತಿದ್ದರು, ಈಗ ನಾವು ಗಗನ ನೌಕೆಗಳಲ್ಲೇ ಹಾರಾಡುತ್ತಿದ್ದೇವೆ, ಮಂತ್ರಾಸ್ತ್ರದಿಂದ ನೀರನ್ನೇ ಹೊರಬರುವಂತೆ ಮಾಡುತ್ತಿದ್ದರು. ಈಗ ನಮ್ಮಲ್ಲೂ ಬೋರವೆಲ್ ಎಂಜಿನ್‌ಗಳಿವೆ, ಬಾಣಗಳಿಂದ ಗುಡ್ಡಬೆಟ್ಟಗಳನ್ನೇ ಪುಡಿಮಾಡುತ್ತಿದ್ದರು, ನಾವು ಮದ್ದುಗುಂಡುಗಳಿಂದ ಪರ್ವತಗಳನ್ನೇ ಹೊಡೆದುರುಳಿಸಬಲ್ಲೆವು, ಅವರೂ ಮೂರು ಲೋಕದಲ್ಲೂ ಸಂಚರಿಸುತ್ತಿದ್ದರು, ನಾವು ಚಂದ್ರನಲ್ಲಿಗೆ ಹೋಗಿ ಮನೆ ಮಾಡಿದ್ದೇವೆ. ಆದ್ದರಿಂದ ಕಲಿಯ ಮಾತುಗಳಲ್ಲಿ ಉತ್ಪ್ರೇಕ್ಷೆ ಎಲ್ಲಿದೆ? ಅದನ್ನೂ ಮೀರಿದವರೂ ಕಲಿಯುಗದಲ್ಲಿ ಹುಟ್ಟಿದ್ದಾರೆ. ಕುಬ್ಜ ಶರೀರಿಗಳಾದರೂ ಗ್ರಹ ನಕ್ಷತ್ರಗಳಾಚೆ ನಡೆಯುವ ವಿದ್ಯಮಾನವನ್ನು ನೋಡಬಲ್ಲ ದೃಷ್ಟಿಯನ್ನು ಸೃಷ್ಟಿಸಿದ್ದಾರೆ. ದ್ವಾಪರಯುಗದ ಎಲ್ಲ ಸಿದ್ಧಾಂತಗಳು ಕಲಿಯುಗದಲ್ಲಿ ಮೂರ್ತರೂಪಕ್ಕಿಳಿದು ವಿಕಸಿತವಾಗಿವೆ. ಕಲಿಯು ತನ್ನ ಯುಗದ ಬಗ್ಗೆ ಕಂಡ ಮುಂಗಾಣ್ಕೆ ಸರಿಯಾಗಿಯೇ ಇದೆ. ಕಲಿಯ ಆತ್ಮವಿಶ್ವಾಸದ ಮಾತುಗಳಿಗೆ ದ್ವಾಪರನು ಏನಂದುಕೊಂಡನೋ ಯಾರಿಗೊತ್ತು?.

**ಕೃಷ್ಣ ಮತ್ತು ವಿದುರನ ಮಧ್ಯ ನಡೆಯುವ ಸಂಭಾಷಣೆ**

ಮಹಾಭಾರತದ ಯುದ್ಧದ ಕಾರಣದಿಂದ ಅಸಂಖ್ಯಾತರು ಅಸುನೀಗಿದ್ದಾರೆ. ಆದಕಾರಣ ಮರಣ ಕಾಲದಲ್ಲಿರುವ ಎಲ್ಲರ ಬಳಿಯಿದ್ದು ಅವರಿಗೆ ಬೇಧಭಾವ ಮಾಡದೆ ಎಲ್ಲರಿಗೂ ಭವ ಬಂಧನವ ಬಿಡಿಸಿ ಬಿಡುಗಡೆಯ ಹಬ್ಬವನ್ನು ನೀಡುವೆನು ಎಂದು ಕೃಷ್ಣನು ಹೇಳುತ್ತಾನೆ. ಆಗ ವಿದುರನು ಕೃಷ್ಣಾ ಇವರಲ್ಲಿ ದುರ್ಜನರು, ಸಜ್ಜನರು, ಧರ್ಮಿಯರು, ಅಧರ್ಮಿಯರೂ ಇದ್ದಾರೆ, ಇವರೆಲ್ಲರನ್ನು ಒಂದೇ ತಕ್ಕಡಿಯುಲ್ಲಿ ಹೇಗೆ ತೂಗುವೆ? ಅವರೆಲ್ಲರೂ ಮುಕ್ತಿಗೆ ಅರ್ಹರೆ? ಎಂದು ಕೇಳುತ್ತಾನೆ.

ಆಗ ಕೃಷ್ಣನು ಕೊಡುವ ಸಮರ್ಥನೆ ಅದೆಷ್ಟು ಸತ್ಯವಾಗಿದೆ ಎನಿಸದೆ ಇರದು. ಈ ಲೋಕದಲ್ಲಿ ಪರಿಪೂರ್ಣವಾದ ಸಜ್ಜನರು, ದುರ್ಜನರು, ಧರ್ಮಿಯರು, ಅಧರ್ಮಿಯರೆಂಬುವವರು ಯಾರೂ ಇಲ್ಲ, ಏಕೆಂದರೆ ಕಾಲನ ಕೈವಶದಿಂದ ಸಂದರ್ಭಾನುಸಾರ ಸಜ್ಜನರೂ ಸಹ ದುರ್ಮಾರ್ಗದಲ್ಲಿ ನಡೆದಿದ್ದಾರೆ, ಕೆಲವು ಭಾರಿ ದುರ್ಜನರೂ ಸಹ ಸನ್ಮಾರ್ಗದಲ್ಲಿಯೂ ನಡೆದಿದ್ದಾರೆ. ಹೀಗಾಗಿ ಸೃಷ್ಟಿಯ ಮೂಲತತ್ವವನ್ನರಿಯದ ಸಂಕುಚಿತ ದೃಷ್ಟಿಯ ಮಾನವರು ನನ್ನನ್ನು ತೆಗಳುವರು, ಬಯ್ಯುವರು ಆದರೆ ನನಗೆ ಯಾರ ಮೇಲೂ ದ್ವೇಷವಾಗಲಿ, ಪ್ರೀತಿಯಾಗಲಿ ಇಲ್ಲ, ನನ್ನ ದೃಷ್ಟಿಯಲ್ಲಿ ಎಲ್ಲರೂ ಒಂದೆ? ಎಲ್ಲರೂ ಮುಕ್ತಿಗೆ ಅರ್ಹರು ಎಂದು ಹೇಳುತ್ತಾನೆ. ನಾವು ಸಹ ನಮ್ಮ ವ್ಯವಹಾರಿಕ ಜೀವನದಲ್ಲಿ ಪಾಪ, ಪುಣ್ಯ, ಅಧರ್ಮ, ಧರ್ಮದ ಕುರಿತಾಗಿ ಮಾತನಾಡುತ್ತಾ ಒಳ್ಳೆಯವರಿಗೆ ಒಳ್ಳೆಯದಾಗಬೇಕು, ಕೆಟ್ಟವರಿಗೆ ಕೆಟ್ಟದಾಗಬೇಕು ಇದನ್ನು ದೇವರು ಮಾಡಬೇಕು ಅದು ಅವನ ಕರ್ತವ್ಯವೇ ಆಗಿದೆ ಎಂದೆಲ್ಲ ರೋಧಿಸುತ್ತೇವೆ, ದೇವರನ್ನು ಬಯ್ಯುತ್ತೇವೆ. ಎಷ್ಟೋ ಒಳ್ಳೆಯವರು, ಪ್ರಾಮಾಣಿಕರು, ಸಜ್ಜನರು ಬಡತನದಲ್ಲಿ, ಕಷ್ಟಗಳಲ್ಲಿ ತೊಳಲಾಡುತ್ತಾರೆ, ಇದಕ್ಕೆ ವಿರುದ್ಧವಾಗಿ ಅಧರ್ಮಿಯರು ಸರ್ವಸುಖಭೋಗದಿಂದ ಮೆರೆಯುತ್ತಾರೆ. ಆವಾಗಲೆಲ್ಲಾ ಸೃಷ್ಟಿಯ ನಿಯಾಮಕನನ್ನು ಹಿಗ್ಗಾಮುಗ್ಗಾ ಬಯ್ಯುತ್ತೇವೆ, ಸೃಷ್ಟಿಯ ಮೂಲತತ್ವಗಳ ಬಗ್ಗೆ ದ್ವಂದ್ವಕ್ಕೆ ಬೀಳುತ್ತೇವೆ, ಜಿಜ್ಞಾಸೆಗೆ ಒಳಗಾಗುತ್ತೇವೆ. ಇದಕ್ಕೆಲ್ಲಾ ಕೃಷ್ಣನು ವಿದುರನಿಗೆ ಹೇಳಿದ ಮಾತು ನೆನಪಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಕೃಷ್ಣನು ಮುಂದುವರೆದು ಹೇಳುತ್ತಾ ಹೀಗೆಲ್ಲಾ ಶ್ರೇಷ್ಠರು, ಕನಿಷ್ಠರು, ಪಾಪಿಗಳು, ಪುಣ್ಯವಂತರು,ಸತ್ಯ, ಅಸತ್ಯ, ನೀತಿ, ಅನೀತಿಯೆಂದು ಹೀಗಳೆಯುವುದಾಗಲಿ, ಮರುಕಪಡುವುದಾಗಲಿ ಬೇಕಿಲ್ಲ ಏಕೆಂದರೆ ಈ ಜಗವೊಂದು ನಾಟಕರಂಗ ಇವರೆಲ್ಲ ಪಾತ್ರಧಾರಿಗಳು, ಇಲ್ಲಿ ಅವರು ರಾಜನೋ, ಮಂತ್ರಿಯೋ, ಸೈನಿಕನೋ, ತಂದೆಯೋ, ತಾಯಿಯೋ, ಕಲಿಯೋ, ದಾನಿಯೋ, ಬ್ರಹ್ಮಚಾರಿಯೋ, ಕಾಮುಕನೋ, ಹಿರಿಯನೋ, ಕಿರಿಯನೋ, ವೇಶ್ಯೆಯೋ, ಪತಿವ್ರತೆಯೋ, ದಾಸಿಯೋ, ರಾಣಿಯೋ ಹೀಗೆ ನಾನು ಕೊಟ್ಟ ಪಾತ್ರಗಳನ್ನು ಅದೆಷ್ಟು ಪರಕಾಯ ಪ್ರವೇಶಿ ಅಭಿನಯಿಸುತ್ತಾರೆಂಬುದಷ್ಟೇ ಮುಖ್ಯ, ಆ ಪಾತ್ರದಿಂದ ಹೊರಬಂದ ನಂತರ ಅವರೆಲ್ಲರೂ ನನಗೆ ಸಮಾನರು, ಸಾವಿನಿಂದ ಅವರೆಲ್ಲರೂ ತಮ್ಮ ಪಾತ್ರಗಳಿಂದ ಹೊರಬಂದಾಗ ಮುಕ್ತಿಗೆ ಸಮಾನವಾಗಿ ಅರ್ಹರು. ಇಲ್ಲಿ ಅಭಿನಯಿಸಿದ ಪಾತ್ರಕ್ಕೆ ತಕ್ಕಂತೆ ಅವರನ್ನು ಶಿಕ್ಷಿಸಿದರೆ 'ನಾಟಕದ ಕಳ್ಳನನ್ನು ಹಿಡಿದು ಸೆರೆಮನೆಗೆ ಅಟ್ಟಿದಂತಾಗುದಿಲ್ಲವೆ'? ಎನ್ನುತ್ತಾನೆ.

ಹತ್ತನೆಯ ಅಂದರೆ ಕೊನೆಯ ದೃಶ್ಯದಲ್ಲಿ ಮಹಾದೇವನು ಕುರುಕ್ಷೇತ್ರದ ಶ್ಮಶಾನದಲ್ಲಿ ಭೀಮಾಕಾರವಾಗಿ ನಿಂತು ಹೇಳಿದ ಜಗನ್ನಿಯಮ ಶ್ಮಶಾನ ಮೌನವನ್ನು ತೂಗಿ ಮಲಗಿಸುವ ಜೋಗುಳದಂತಿದೆ.

***ಎಲ್ಲ ದಾನಗಳು, ಎಲ್ಲ ಧರ್ಮಗಳು,***

***ಕಡಿಗಿಲ್ಲಿಗೇ,...ಎನ್ನ ಬಳಿಗೆ!***

***ಎಲ್ಲ ಪಾಪಗಳು, ಎಲ್ಲ ಪುಣ್ಯಗಳು,***

***ಕಡೆಗೊಂದು ನಗೆಗೆ, ಭಸ್ಮಮೆನಗೆ!***

***ಆ ಆಕಾಶ, ಈ ಭೂಮಿ, ಸಾಗರ ಎಲ್ಲವೂ ಕೊನೆಗೆ ಇಲ್ಲಿಯೆ ನನ್ನಲ್ಲಿಯೇ ಲೀನವಾಗುವುದು.***

***ಕಾಲದೇಶಗಳು, ಜನನ, ಮರಣಗಳು,***

***ಜೀವಕೋಟಿಗಳು, ಮಸಣದೆಡೆಗೇ!***

***.....ಮಸಣದೆಡೆಗೇ! ಕಟ್ಟಕಡೆಗೇ!***

***ನನ್ನ ಹುಚ್ಚುನಿಂದಾಗಿ ಹುಟ್ಟಿದ ಈ ಸೃಷ್ಟಿ, ಹಾಳಾಗಿದ್ದು ನನ್ನ ಹುಚ್ಚಿನಿಂದಾಗಿಯೇ....................***

***ಇದೆ ಜಗದ ಮೊತ್ತಮೊದಲಿದೆ ಜಗದ ತುತ್ತತುದಿ***

***ಇದೆ ಜಗದ ಕಟ್ಟಕಡೆ ನೆಚ್ಚಿಗೇ!***

***....ಕಡೆ ನೆಚ್ಚಿಗೇ! ಕಡೆ ನೆಚ್ಚಿಗೇ!***

ಇದನ್ನೋದಿದ ಮೇಲೆ ಹೇಳಲು ಕೇಳಲು ದಾರಿ ಕಾಣುತ್ತಿಲ್ಲ, ಅಲ್ಲಲ್ಲ ದಾರಿಯೇ ಇಲ್ಲ, ಎಲ್ಲ ದಾರಿಗಳು ಅವನಲ್ಲಿಯೇ ಲೀನವಾಗಿರುವಾಗ ಬೇರೊಂದು ಮಾರ್ಗದ ಹುಡುಕಾಟವೇಕೆ?, ಬೇರೆಲ್ಲೋ ಸೇರುವ ಬಯಕೆಯ ಕಸರತ್ತೇಕೆ?. ಹೌದಲ್ವಾ ಎಲ್ಲ ಪ್ರಶ್ನೆಗಳಿಗೂ ಉತ್ತರ, ಎಲ್ಲ ಉತ್ತರಗಳಿಗೂ ಸಮರ್ಥನೆ ಅಲ್ಲಿಯೇ ಇದೆ.

ಮಹಾದೇವನು(ರುದ್ರ) ಜಗನ್ನಿಯಮವನ್ನನುರಿಸಿ ಧ್ಯಾನಮಗ್ನನಾಗಿದ್ದಾಗ ಅಲ್ಲಿಗೆ ಕೃಷ್ಣನ ಆಗಮನವಾಗುತ್ತದೆ. ಆಗ ರುದ್ರನು ಈ ಅದ್ಭುತ ಕುರುಕ್ಷೇತ್ರವೆಂಬ ದೃಶ್ಯಮಹಾಕಾವ್ಯವನ್ನು ನೋಡಿ ಅದರ ಸೊಬಗನ್ನು ಬಣ್ಣಿಸಲಸಾಧ್ಯವಾಗಿದೆ ನವರಸದಿಂದಾವರಿಸಿದ ಪರಿಪೂರ್ಣವಾಗಿದೆ ಎನ್ನುತ್ತಾನೆ. ಮುಂದುವರೆದು ವಾಸುದೇವ ಮುಂದಾವ ಕಾವ್ಯವಂ ಕಟ್ಟುವೆಯಾ? ಅದಾವ ಪಾತ್ರಗಳನ್ನು ಸೃಷ್ಟಿಸುವೆಯಾ? ಎಂದು ಕೇಳಿದಾಗ, ಕಲಿಯುಗದ ಮಹಾಕಾವ್ಯವನ್ನು, ನಾಳೆಯೇ ಅದರ ಪೀಠಿಕೆಯ ದೃಶ್ಯ ಆರಂಭವಾಗುತ್ತದೆ ಎಂದು ಕೃಷ್ಣನು ಹೇಳುತ್ತಾನೆ. ಕೃಷ್ಣನು ಕಲಿಯುಗದ ದೃಶ್ಯಕಾವ್ಯದ ಒಂದೊಂದೇ ಪರದೆಯನ್ನು ತೋರಿಸುತ್ತಾನೆ. ಅದೆಷ್ಟು ಸರಳವಾಗಿ ಹೇಳುತ್ತಾನೆ ನೋಡಿ ಕೃಷ್ಣ , ಈತನೊಬ್ಬ ಕವಿ, ಸೂತ್ರದಾರ, ಈತನ ಕೃತಿಯೇ ಕಲಿಯುಗ. ಈ ಪೃಥ್ವಿ, ಆಕಾಶವೇ ನಾಟ್ಯರಂಗ, ಚರಾಚರ ಜೀವಿಗಳು, ಪಂಚಭೂತಗಳೇ ಪಾತ್ರಧಾರಿಗಳು ಅಬ್ಬಬ್ಬಾ! ಇದನ್ನೆಲ್ಲ ಕಾವ್ಯವಾಗಿ ಕಾಣಿಕೆ ನೀಡಿದ ಕುವೆಂಪು ಕವಿ ಪುಂಗವನೇ ಸರಿ. ಕೃಷ್ಣನೇ ಇಂತಹ ಮಹಾಕವಿಗಳಿಗೆಲ್ಲ ಕವಿಕುಲ ತಿಲಕ, ವಿಶ್ವಕವಿ. ಕೃಷ್ಣನು ಕಲಿಯುಗದ ಮಹಾಕಾವ್ಯವನ್ನು ತೋರಿಸಲು ಮುಂದಾದ ಕಾಲದ ಪರದೆಗಳನ್ನು ಒಂದೊಂದಾಗಿ ತೆರೆಯುತ್ತಾನೆ..... ಅದೋ ಭಾರತದೇಶ, ಉಪನಿಷತ್, ಗೌತಮ–ಬುದ್ಧ, ಮೌಢ್ಯ ನಿವಾರಕನು, ಅಶೋಕ ಚಕ್ರವರ್ತಿ ಶ್ರೇಷ್ಠನು, ಇದು ಏಷ್ಯಾ ಖಂಡ, ಅದೋ ದೇವಪುತ್ರ ಕ್ರಿಸ್ತ ದೀನ ರಕ್ಷಕನು, ಅದೋ ಯವನದೇಶ, ರೋಮ ಚಕ್ರಾಧಿಪತ್ಯ, ಯುರೋಪಖಂಡ ಆಂಗ್ಲರ ದೇಶ, ಯಂತ್ರ ಕೌಶಲಕ್ಕೆ ಹೆಸರಾದವರು, ಇದೋ ಅರಬಿಸ್ಥಾನ ಮಹಮ್ಮದ ಪೈಗಂಬರರು ಇಸ್ಲಾಂ ಧರ್ಮದ ಪ್ರವಾದಿ, ಇದೋ ಕೇರಳದ ಶಂಕರಾಚಾರ್ಯರು ಮೇಧಾವಿಗಳು, ಮೊಗಲ್ ಸಾಮ್ರಾಜ್ಯ, ಮಹಾರಾಷ್ಟ್ರ, ಕನ್ನಡದೇಶ ಅದೋ ಶಕ್ತಿ ಕವಿ ರನ್ನ, ವಿಜಯನಗರ ಸಾಮ್ರಾಜ್ಯ..........

ಹಾಗೆಯೇ ಕಾಲದ ಪರದೆಗಳನ್ನು ಸರಿಸುತ್ತಾ ಅದೋ ಪಾಶ್ಚಾತ್ಯರ ಘೋರ ಯುದ್ಧಗಳು, ರಷ್ಯಾ ದೇಶ ರಾಜಕೀಯ ವಿಪ್ಲವ, ಚಕ್ರಾಧಿಪತ್ಯನಾಶ, ಪ್ರಜಾಧಿಪತ್ಯ ಸ್ಥಾಪನೆ, ಅದೋ ಚೀನಾ ದೇಶ ರಕ್ತ ಪ್ರವಾಹ ಸಿಡಿಗುಂಡುಗಳಾಟ..............

ಇದೋ ಭಾರತ ದೇಶ ದರಿದ್ರತನ, ಬಡತನ, ದೌರ್ಬಲ್ಯ, ಅದೋ ರಾಮಕೃಷ್ಣ, ಸರ್ವಧರ್ಮ ಸಮನ್ವಯಾಚಾರ್ಯ ವಿವೇಕಾನಂದ, ಸ್ವಾತಂತ್ರ್ಯ ಸಂಗ್ರಾಮ, ಅಹಿಂಸಾವ್ರತ ಮಹಾತ್ಮಾ ಗಾಂಧೀಜಿ, ಸತ್ಯಾಗ್ರಹ, ಇಂಗ್ಲೀಷರು ಅತ್ಯಾಚಾರಿಗಳು, ದುರಾತ್ಮರು ಎಂದು ಹೇಳಿದಾಗ ರುದ್ರನು ಶೂಲವೆತ್ತಿ ಹೊಯ್ಯಲು ಮುಂದಾಗುತ್ತಾನೆ. "ತಾಳ್ಮೆ, ತಾಳ್ಮೆ ಓ ರುದ್ರ ಕೆಡಿಸದಿರು ನನ್ನ ಕಾವ್ಯವನ್ನು ಮುಂದೆ ನೋಡು" ಎಂದು ಕೃಷ್ಣನು ಹೇಳುತ್ತಾನೆ. ಆ ಆಂಗ್ಲರ ಸಾರ್ವಭೌಮತ್ವ ಭಂಗ, ಭಾರತ ಸ್ವತಂತ್ರ, ಪ್ರಜಾಪ್ರಭುತ್ವ ಸ್ಥಾಪನೆ, ಅದೋ ನೋಡು ಸರ್ವ ಸಮತೆ, ಜಗತ್ ಕಲ್ಯಾಣ.........

ಹಾಗೆಯೆ ದೂರದಲ್ಲಿ ಬಹುದೂರದಲ್ಲಿ ಕಾಲಗರ್ಭದಲ್ಲಿ ಸಾಮಾನ್ಯ ಮಾನವನ ಸಂಸಾರ, ಸತಿಪತಿಗಳ ಶೃಂಗಾರ, ಮಕ್ಕಳಾಟ, ಭಿಕ್ಷಾಟನೆ, ವೇಶ್ಯಾಗಾರಿಕೆ, ನೇಗಿಲಯೋಗಿ........ಇದೆ ನನ್ನ ಕಾವ್ಯ ಹೇಗಿದೆ?

ಹೀಗೆ ಕವಿ ಪುಂಗವ ಕುವೆಂಪು ಕೃಷ್ಣನ ನಿರ್ದೇಶನದಲ್ಲಿ ದ್ವಾಪರಯುಗದ ನಾಶದೊಂದಿಗೆ ಕಲಿಯುಗದ ದೃಶ್ಯ ವೈಭವನ್ನು ತೋರಿಸುತ್ತಾ ವೇದ ಉಪನಿಷತ್‌ನಿಂದ ಹಿಡಿದು ಜಗತ್ತಿನ ಎಲ್ಲೆಡೆಗಳಲ್ಲಿ

ಹುಟ್ಟಿದ ಧರ್ಮಗಳು, ಪ್ರವಾದಿಗಳು, ಆಯಾ ದೇಶದ ಮಹಾನ್ ಸತ್ಪುರುಷರು, ಸಮಾಜ ಸುಧಾರಕರು, ಸರ್ವಾಧಿಕಾರಿಗಳು, ರಕ್ತಪಿಪಾಸುಗಳು, ಚಕ್ರಾಧಿಪತ್ಯದ ನಾಶ, ಪ್ರಜಾಪ್ರಭುತ್ವದ ಸ್ಥಾಪನೆ, ಸಾಮ್ರಾಜ್ಯ ಶಾಹಿಗಳು, ವಿಸ್ತರಣಾವಾಧಿಗಳು, ಯಂತ್ರ ಕೌಶಲ ಕೊನೆಗೆ ಸಾಮಾನ್ಯ ಸಂಸಾರದವರೆಗೂ ಕಲಿಯುಗದ ನಾಟಕ ನಡೆಯುತ್ತದೆ. ಹಾಗೆ ನೋಡಿದರೆ ಇನ್ನೂ ನಡೆಯುತ್ತಾ ಇದೆ ಮಹಾದೇವ ಅದನ್ನು ನೋಡುತ್ತಾ ಇದ್ದಾನೆ, ಪರದೆ ಬಿದ್ದಿಲ್ಲ ಯಾವಾಗ ಬೀಳುತ್ತೋ? ಅದು ಸೂತ್ರಧಾರನಿಗೆ ಗೊತ್ತು.

ಈ ಕಲಿಯುಗ ಮಹಾಕಾವ್ಯದ ಅಂತ್ಯ ಅದಾವುದೋ? ಹೇಗಿರುವುದೋ? ಅದನ್ನು ನೋಡಲು ಬದುಕಿರುವವರಾರೊ? ಕಲಿಯುಗದ ಶ್ಮಶಾನದ ಜಾಗೆ ಎಲ್ಲಿಹುದೋ? ಅಲ್ಲಿಯ ಹೆಣಗಳಾರೊ? ಅಂತಹ ಶ್ಮಶಾನದಲ್ಲಿ ಮತ್ತೆ ಮಹಾದೇವ(ರುದ್ರ)ನು ಬರುವನೊ? ಬರುವನು, ಬಂದರೆ ಮತ್ತಿನ್ನೇನು ಉಸುರುವನೊ? ಮತ್ತಾವ ಯುಗದ ಕಾವ್ಯವನ್ನು ತೋರಿಸಲು ಕೃಷ್ಣನನ್ನು ಕೇಳುವನೊ? ಗೊತ್ತಿಲ್ಲ. ನಾವು ಈ ಕಲಿಯುಗದ ಪಾತ್ರಧಾರಿಗಳು, ಪಾತ್ರದ ಪರಕಾಯ ಪ್ರವೇಶ ಮಾಡಿದ್ದೆವೆಯೋ? ಗೊತ್ತಿಲ್ಲ. ಯುಗಪುರುಷನು ಮೆಚ್ಚುವ ನಟಸಾರ್ವಭೌಮರಾರಾಗುವರೊ?....................................

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಈ ನಾಟಕ ಮಹಾ ಯದ್ದದ ಪರಿಣಾಮವನ್ನು ತೀವ್ರತರವಾಗಿ ಕಟ್ಟಿಕೊಡುವ ನಾಟಕ. ಮೊದಲನೆಯ ಮಹಾಯುದ್ದದ ಪರಿಣಾಮದಿಂದಾಗೆ ಪ್ರಪಂಚದಲ್ಲೆಲ್ಲಾ ಯುದ್ಧ ವಿರೋಧಿ ಮಾತುಗಳು ಕೇಳುತ್ತಿದ್ದಾಗ ಶ್ಮಶಾನ ಕುರುಕ್ಷೇತ್ರ ನಾಟಕವನ್ನು ಕುವೆಂಪುರವರು ರಚಿಸಿದ್ದರು. ಕುರಕ್ಷೇತ್ರ ಯುದ್ದವೇ ನಾಟಕದ ವಸ್ತುವಾದರೂ, ಅದನ್ನು ಯಾವ ಕಾಲಕ್ಕಾದರೂ ಅನ್ವಯಿಸಿಕೊಳ್ಳಬಹುದಾದ ನಾಟಕವಾಗಿರುವುದರಿಂದ ಅದರ ಸರ್ವಕಾಲಿಕ ಸತ್ಯ ಮನದಟ್ಟಾಗುತ್ತದೆ. ಒಂದೊಂದು ಯುದ್ದವು ಪ್ರಾರಂಭವಾಗುವಾಗ ಅದು ಯುದ್ದವನ್ನೇ ಕೊನೆಗಾಣಿಸಿ ಅನ್ಯಾಯವೆಲ್ಲ ತೊಲಗಿ ನ್ಯಾಯ ಸ್ಥಾಪನೆ ಆಗುವುದೆಂದು ಭಾವಿಸುತ್ತೇವೆ. ನಾಟಕದಲ್ಲಿ ಬರುವ ಪುನರ್‌ಸೃಷ್ಟಿಯ ಪ್ರಾರಂಭ. ನಾಟಕಾರಾಂಭ; ವಿಶ್ವಲೀಲೆ ಸಾಗುತ್ತದೆ ಎಂಬ ಮಾತುಗಳು ನಾಟಕದ ಮಹತ್ವತೆಯನ್ನು ಸಾರುತ್ತದೆ.

**ಪರಾಮರ್ಶನ ಗ್ರಂಥಗಳು**

- ಕುವೆಂಪು. (1913). ಶ್ಮಶಾನ ಕುರುಕ್ಷೇತ್ರಂ. ಉದಯರವಿ ಪ್ರಕಾಶನ, ಮೈಸೂರು.